ಮೈಸೂರ ಗೆಜಿಟ.

ನಂ. 36 ಸರ್ಕಾರದಿಂದ ಫಾಯಿಷ್ ಆದ್ದು. ಸ್ 1884

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ॥ 6, ಸ್ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟಿಂಡೆಂಟರು, ಕಾಂಟ್ರೋಲರವರು, ಪಬ್ಲಿಕ ವರ್ಕ್‌ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಜೇ ಬಕ್‌ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜೀರು, ಡಿ॥ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೂಪರ್ಟಿಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಮೈಸೂರು ಶೇಮೆಯ ಲ್ಯಾಂಡ್ ರೆವಿನ್ಯು ರೆಗ್ಯುಲೇಷನಿನ ಮಸೂದಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 15ನೇ ಆಗಸ್ಟ್ 1884.

ನಂ. 119.—(1870ನೇ ಇಸವಿ VIIನೇ ನಂಬರ್ ಆಕ್ಟ್‌ಎಂಬ) ಕೋರ್ಟ್‌ಫೀಸ್ ಆಕ್ಟಿನ 35ನೇ ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಶ್ರೀಮ್ಮಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ಮೈಸೂರು ಚೀಫ್ ಕೋರ್ಟಿನಲ್ಲಿ ಪೆಬ್ಬ ಅಡ್ವೊಕೇಟ್‌ರಾಗಿ ದಾಖಲ್ಮಾಡಲ್ಪಟ್ಟ, ಇಂಗ್ಲೆಂಡ್ ಯಾ ಐರ್‌ಲೆಂಡ್ ಕೋರ್ಟಿನ ಯಾವದಾದರೂ ಇಗಳ ಬ್ಯಾರಿಸ್ಟರ್–ಆಟ್–ಲಾ ಯವರುಗಳಿಂದಲಾಗಲಿ, ಸ್ಕಾಟ್‌ಲೆಂಡಿನ ಫ್ಯಾಕಲ್ಟಿ ಆಫ್ ಅಡ್ವೊಕೇಟ್ಸ್ ಯೆಂಬದರ ಯಾವ ಮೆಂಬರ್‌ನಿಂದಾಗಲಿ, ಮೈಸೂರು ದೇಶದಲ್ಲಿನ ಕೋರ್ಟುಗಳಲ್ಲಿ ದಾಖಲ್ಮಾಡಲ್ಪಡುವ ವಕಾಲತ್‌ನಾಮೆಗಳ ಮೇಲೆ, ಸದರೀ ಆಕ್ಟಿನ IIನೇ ಪೆಡ್ಯೂಲ್ 10ನೇ ಕಲಂ ಅನುಸರಿಸಿ ಸಾವತೀಮಾಡಲ್ಪಡಬೇಕಾದ ಫೀಜು ಪೂರ್ತಿಯಾಗಿ ಮಾಫಾಗತಕ್ಕದ್ದು.

ಕೆ. ಶೇಷಾದ್ರಿಅಯ್ಯರ್,
ದಿವಾ.